page no. 6 23-2-2014 Vijayvani

# ಸರ್ಕಾರಕ್ಕೇ ಕರೆಂಟ್ ಶಾಕ್

## ■ ಒಳ್ಳೆ ರೇಟ್ ಕೊಡಿ; ಇಲ್ಲ ವಿದ್ಯುತ್ ಬಿಡಿ ■ ನೆರೆ ರಾಜ್ಯಕ್ಕೆ ವಿದ್ಯುತ್ ಮಾರಾಟ

■ ರುದ್ರಣ್ಣ ಹರ್ತಿಕೋಟೆ

**ಬೆಂಗಳೂರು:** ಕಬ್ಬಿನ ಬೆಲೆ ಸಂಬಂಧ ಸರ್ಕಾರದ ಜತೆ ಕ್ಯಾತೆ ತೆಗೆದಿರುವ ಸಕ್ಕರೆ ಕಾರ್ಖಾನೆ ಮಾಲೀಕರು ಇದೀಗ ತಾವು ಕೇಳಿದ ದರವನ್ನು ಸರ್ಕಾರ ಕೊಡಲು ಒಪ್ಪಿಲ್ಲ ಎಂಬ ಕಾರಣಕ್ಕೆ ತಾವು ಉತ್ಪಾದಿಸುವ ವಿದ್ಯುತನ್ನು ಸಹ ನೆರೆ ರಾಜ್ಯಗಳಿಗೆ ನೀಡಲು ಮುಂದಾಗಿದ್ದಾರೆ.

ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು 450 ರಿಂದ 500 ಮೆ.ವ್ಯಾ.ನಷ್ಟು ವಿದ್ಯುತ್ ಉತ್ಪಾದನೆ ಮಾಡುತ್ತಿವೆ. ಆದರೆ ಸಕ್ಕರೆ ಕಾರ್ಖಾನೆಗಳು ಸರ್ಕಾರ ನಿಗದಿ ಮಾಡಿರುವ ದರಕ್ಕೆ ಒಪ್ಪದಿರುವುದರಿಂದ ಇದೀಗ ಆ ವಿದ್ಯುತ್‌ನ ಬಹುಪಾಲು ಆಂಧ್ರ, ಮಹಾರಾಷ್ಟ್ರ, ಕೇರಳದ ಪಾಲಾಗುತ್ತಿದೆ.

**ದರಕ್ಕಾಗಿ ವರಾತ:** ಪ್ರತಿ ಯೂನಿಟ್‌ಗೆ 6.50 ರೂ. ಖರೀದಿ ದರ ನಿಗದಿಗೆ ಕಾರ್ಖಾನೆ ಮಾಲೀಕರು ಪಟ್ಟು ಹಿಡಿದಿದ್ದಾರೆ. ಆದರೆ ಕೆಇಆರ್‌ಸಿ ಯೂನಿಟ್‌ಗೆ 5.50 ರೂ. ನೀಡುವುದಾಗಿ ಹೇಳಿದೆ. ಅದೇ ಕಾರಣಕ್ಕೆ ಬಹುತೇಕ ಕಾರ್ಖಾನೆ ಮಾಲೀಕರು ನೆರೆ ರಾಜ್ಯಗಳಿಗೆ ವಿದ್ಯುತ್ ಮಾರಲು ಮುಂದಾಗಿದ್ದಾರೆ. ಆಂಧ್ರದಲ್ಲಿ ಯೂನಿಟ್‌ಗೆ 6.90 ರೂ. ನೀಡಲಾಗುತ್ತಿದೆ. ಮಹಾರಾಷ್ಟ್ರ ಹಾಗೂ ಕೇರಳ ಸಹ ಪ್ರತಿ ಯೂನಿಟ್‌ಗೆ ಸರಾಸರಿ 6.25 ರೂ. ನೀಡುತ್ತಿವೆ. ಆದರೆ ರಾಜ್ಯದಲ್ಲಿ ಆ ದರ ನೀಡಲು ಸರ್ಕಾರ ತಯಾರಿಲ್ಲ.

**ಹಾಲಿ ಖರೀದಿ ದರವೆಷ್ಟು?:** ರಾಜ್ಯದಲ್ಲಿ ಈಗ ಬೇರೆ ಬೇರೆ ಮೂಲಗಳಿಂದ 20.42 ದಶಲಕ್ಷ ಯೂನಿಟ್ ವಿದ್ಯುತ್ ಖರೀದಿ ಮಾಡಲಾಗುತ್ತಿದೆ. ಯೂನಿಟ್‌ಗೆ ಸರಾಸರಿ 4.20 ರೂ.ನಿಂದ 5.50ರೂ.ವರೆಗೆ ದರ ನಿಗದಿ ಮಾಡಲಾಗಿದೆ. ಅದಕ್ಕಿಂತ ಹೆಚ್ಚು ದರ ನೀಡಿ ಖರೀದಿಸಿದರೆ ವಿದ್ಯುತ್ ಸರಬರಾಜು ಕಂಪೆನಿಗಳಿಗೆ ನಷ್ಟವಾಗುತ್ತದೆ ಎಂದು ಕೆಇಆರ್‌ಸಿ ಎಚ್ಚರಿಸಿದೆ.

**ಅನುಕೂಲಕ್ಕೆ ಬಂದ ಕೋರ್ಟ್ ಆದೇಶ:** ವಿದ್ಯುತ್ ಕಾಯ್ದೆಯ ಸೆಕ್ಷನ್ 11ರ ಪ್ರಕಾರ ಇಲ್ಲಿ ಉತ್ಪಾದನೆಯಾಗುವ ವಿದ್ಯುತ್ತನ್ನು ಇಲ್ಲೇ ಮಾರಾಟ ಮಾಡಬೇಕು. ಆದರೆ ಸಕ್ಕರೆ ಕಾರ್ಖಾನೆಗಳು ಕಳೆದ ವರ್ಷ ನ್ಯಾಯಾಲಯದ ಮೆಟ್ಟಿಲು ಏರಿದಾಗ ಆ ನಿರ್ಬಂಧದಿಂದ ವಿನಾಯಿತಿ ನೀಡಲು ಕೋರ್ಟ್ ಸೂಚಿಸಿರುವುದು ಹೊರ ರಾಜ್ಯಕ್ಕೆ ವಿದ್ಯುತ್ ಮಾರಾಟ ಮಾಡಲು ಕಾರ್ಖಾನೆಗಳಿಗೆ ಅನುಕೂಲವಾಗಿದೆ.

**ಏರುತ್ತಿದೆ ಬೇಡಿಕೆ:** ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ದಿನೇದಿನೇ ಹೆಚ್ಚುತ್ತಿದೆ. ಕಳೆದ ವರ್ಷ ಇದೇ ಸಂದರ್ಭದಲ್ಲಿ 170 ದಶಲಕ್ಷ ಯೂನಿಟ್‌ಗಳಷ್ಟು ಇದ್ದ ಬೇಡಿಕೆ, ಇದೀಗ 193 ದಶಲಕ್ಷ ಯೂನಿಟ್‌ಗೆ ತಲುಪಿದೆ. ಬೇಸಿಗೆ ಆರಂಭದ ವೇಳೆಗೆ ಬೇಡಿಕೆ 200 ದಶಲಕ್ಷ ಯೂನಿಟ್ ತಲುಪುವ ನಿರೀಕ್ಷೆ ಇದೆ.

**ಎರಡು ಒಪ್ಪಂದ:** ಮಹಾರಾಷ್ಟ್ರ ಹಾಗೂ ದಾಮೋದರ ವ್ಯಾಲಿಯಿಂದ ತಲಾ 100 ಮೆಗಾ ವ್ಯಾಟನ್ನು ಪ್ರತಿ ಯೂನಿಟ್‌ಗೆ 5 ರೂ.ಗಿಂತ ಕಡಿಮೆ ದರಕ್ಕೆ ಖರೀದಿಗೆ ಸರ್ಕಾರ ಎರಡು ದಿನಗಳ ಹಿಂದಷ್ಟೇ ಒಪ್ಪಂದ ಮಾಡಿಕೊಂಡಿದೆ.



❝ ಸಕ್ಕರೆ ಕಾರ್ಖಾನೆಗಳು ಹೆಚ್ಚಿನ ದರ ಕೇಳುತ್ತಿವೆ. ಕೆಇಆರ್‌ಸಿ ನಿಗದಿ ಮಾಡಿರುವ ದರ ನೀಡಲು ಸಿದ್ಧವಿದ್ದೇವೆ. ಕಾರ್ಖಾನೆಗಳು ಬೇರೆ ಬೇರೆ ರಾಜ್ಯಕ್ಕೆ ನೀಡುತ್ತಿರುವುದರಿಂದ ನಾವು ಸಹ ಬೇರೆ ಕಡೆಯಿಂದ ಕಡಿಮೆ ದರಕ್ಕೆ ವಿದ್ಯುತ್ ತರಲು ಒಪ್ಪಂದ ಮಾಡಿಕೊಂಡಿದ್ದೇವೆ.

। ಡಿ.ಕೆ. ಶಿವಕುಮಾರ್ ಇಂಧನ ಸಚಿವ



### ಕಾರಿಡಾರ್ ಸಮಸ್ಯೆ

1500 ಮೆ. ವ್ಯಾ. ವಿದ್ಯುತ್ ಖರೀದಿಗೆ ಟೆಂಡರ್ ಪ್ರಕ್ರಿಯೆ ಅಂತಿಮ ಮಾಡಿದೆ. ಆದರೆ ಕಾರಿಡಾರ್ ಇಲ್ಲ. ಹೊಸದಾಗಿ ಆಗಿರುವ ಕಾರಿಡಾರ್‌ನಲ್ಲಿ ಇನ್ನೂ ಸಾಕಷ್ಟು ಸಮಸ್ಯೆಗಳಿವೆ. ರಾಜ್ಯಕ್ಕೆ ಕಾರಿಡಾರ್ ಮೇ ತಿಂಗಳ ತನಕ ಲಭ್ಯವಾಗುವುದಿಲ್ಲ. ನೆರೆ ರಾಜ್ಯದಲ್ಲಿ ವಿದ್ಯುತ್ ಸಿಕ್ಕರೂ ತರಲು ಸಾಧ್ಯವಿಲ್ಲ. ಆದ್ದರಿಂದಲೇ ಸರ್ಕಾರ ರಾಜ್ಯದಲ್ಲಿರುವ ಖಾಸಗಿ ವಿದ್ಯುತ್ ಉತ್ಪಾದಕರ ಮೇಲೆ ಅವಲಂಬಿತವಾಗಬೇಕಾಗಿದೆ. ಜಿಂದಾಲ್ ಹಾಗೂ ಇತರೆ ಖಾಸಗಿ ಉತ್ಪಾದಕರಿಂದ ರಾಜ್ಯಕ್ಕೆ 950 ಮೆ. ವ್ಯಾ. ಲಭ್ಯವಾಗುತ್ತಿದೆ. ಆದರೆ ಸಾಕಾಗುತ್ತಿಲ್ಲ.

---

23/2

# 450 ಮೆ.ವಾ.ಖರೀದಿಗೆ ಒಪ್ಪಿಗೆ



**ಬೆಂಗಳೂರು. ಫೆ.22:** ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಹಾಗೂ ಪೂರೈಕೆ ನಡುವೆ ಶೇ. 10 ರಿಂದ 15ರಷ್ಟು ಮಾತ್ರ ವ್ಯತ್ಯಾಸವಿದೆ. ಬೇಸಿಗೆ ಅವಧಿಯಲ್ಲಿ ಇನ್ನಷ್ಟು ಬೇಡಿಕೆ ಹೆಚ್ಚಾಗುತ್ತದೆ. ಜತೆಗೆ ಪರೀಕ್ಷೆಗಳ ಸಮಯ ಕೂಡ ಆಗಿರುತ್ತದೆ. ಈ ಹಿನ್ನೆಲೆಯಲ್ಲಿ ವಿದ್ಯುತ್ ಖರೀದಿಗೆ ಸರ್ಕಾರ ಮುಂದಾಗಿದೆ ಎಂದು ಇಂಧನ ಸಚಿವ ಡಿ.ಕೆ.ಶಿವಕುಮಾರ್ ಅವರು ಶನಿವಾರ ತಿಳಿಸಿದರು.

ಕೆಪಿಸಿಸಿಕಚೇರಿಗೆಭೇಟಿನೀಡಿಪಕ್ಷದಮುಖಂಡರು ಹಾಗೂ ಕಾರ್ಯಕರ್ತರ ಅಹವಾಲು ಸ್ವೀಕರಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು ದಾಮೋದರ್ ವ್ಯಾಲಿ ಕಾರ್ಪೊರೇಷನ್‌ನಿಂದ 900 ಮೆ.ವಾ.ವಿದ್ಯುತ್ ಖರೀದಿಗೆ ಬೇಡಿಕೆ ಮಂಡಿಸಿದ್ದೆವು. ಮುಖ್ಯ ಕಾರ್ಯದರ್ಶಿ ಅವರು ಅಲ್ಲಿಗೆ ತೆರಳಿ ಮಾತುಕತೆ ನಡೆಸಿ ಬಂದಿದ್ದು ಸದ್ಯಕ್ಕೆ 450 ಮೆ. ವಾ.ವಿದ್ಯುತ್ ಪೂರೈಸಲು ಒಪ್ಪಿದ್ದಾರೆ. 25 ವರ್ಷಗಳ ಅವಧಿಗೆ ಸದ್ಯವೇ ಒಪ್ಪಂದ ಮಾಡಿಕೊಳ್ಳಲಾಗುವುದು, ಖರೀದಿ ದರದ ಬಗ್ಗೆ ಇನ್ನೂ ಅಂತಿಮ ತೀರ್ಮಾನ ಆಗಿಲ್ಲ ಎಂದು ಸ್ಪಷ್ಟಪಡಿಸಿದರು.

Vijayvani 23-2-2014

# ಬೇಸಿಗೆಯಲ್ಲಿ ಲೋಡ್ ಶೆಡ್ಡಿಂಗ್ ಇಲ್ಲ: ಡಿಕೆಶಿ

## ■ 1 ಸಾವಿರ ಮೆಗಾವ್ಯಾಟ್ ವಿದ್ಯುತ್ ಖರೀದಿಗೆ ಒಪ್ಪಂದ

**ಬೆಂಗಳೂರು:** ಮುಂಬರುವ ಬೇಸಿಗೆಯಲ್ಲಿ ಯಾವುದೇ ಕಾರಣಕ್ಕೂ ಲೋಡ್‌ಶೆಡ್ಡಿಂಗ್ ಮಾಡುವುದಿಲ್ಲ ಎಂದು ಇಂಧನ ಸಚಿವ ಡಿ.ಕೆ. ಶಿವಕುಮಾರ್ ಭರವಸೆ ನೀಡಿದ್ದಾರೆ.



ಕೆಪಿಸಿಸಿ ಕೇಂದ್ರ ಕಚೇರಿಗೆ ಭೇಟಿ ನೀಡಿ ಕಾರ್ಯಕರ್ತರ ಅಹವಾಲು ಸ್ವೀಕರಿಸಿದ ನಂತರ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯುತ್ ಅಭಾವ ಎದುರಾಗುವುದನ್ನು ತಡೆಯಲು ಕೇಂದ್ರ ಸರ್ಕಾರಿ ಸ್ವಾಮ್ಯದ ದಾಭೋಲ್ ವಿದ್ಯುತ್ ಕಂಪನಿಯಿಂದ ಒಂದು ಸಾವಿರ ಮೆಗ್ಯಾವ್ಯಾಟ್ ವಿದ್ಯುತ್ ಖರೀದಿಗೆ ಮುಂದಿನ ವಾರ ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ ಎಂದರು.

ಪರೀಕ್ಷೆ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಬೇಸಿಗೆಯಲ್ಲಿ ಕುಡಿಯುವ ನೀರು ಪೂರೈಕೆಗೆ ತೊಂದರೆಯಾಗದಂತೆ ಯಥಾಸ್ಥಿತಿ ವಿದ್ಯುತ್ ಪೂರೈಕೆ ಮಾಡಲು ಅಧಿಕಾರಿಗಳಿಗೆ ಆದೇಶಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಅಕ್ರಮ-ಸಕ್ರಮ ಯೋಜನೆಯಡಿ 2 ಲಕ್ಷ ಕೃಷಿ ಪಂಪ್ ಸೆಟ್‌ಗಳ ಅರ್ಜಿ ಇತ್ಯರ್ಥವಾಗಬೇಕಿದೆ. ಪ್ರತಿ ಪಂಪ್‌ಸೆಟ್‌ಗೆ 1 ರಿಂದ 1.5 ಲಕ್ಷ ರೂ. ವೆಚ್ಚವಾಗುತ್ತಿದೆ. ಕುಡಿಯುವ ನೀರು ಹಾಗೂ ಕೃಷಿ ಪಂಪ್ ಸೆಟ್‌ಗಳಿಗೆ ಅನುಕೂಲ ಕಲ್ಪಿಸಲು ಈಗಾಗಲೇ ಟ್ರಾನ್ಸ್‌ಫಾರ್ಮರ್‌ಗಳ ಸಂಗ್ರಹಣಾ ಘಟಕ ಆರಂಭಿಸಲಾಗಿದೆ. ಟ್ರಾನ್ಸ್‌ಫಾರ್ಮರ್ ಹಾಳಾಗಿದ್ದರೆ ಎರಡ್ಮೂರು ದಿನದೊಳಗೆ ಹೊಸ ಟ್ರಾನ್ಸ್‌ಫಾರ್ಮರ್ ಅಳವಡಿಸುವ ವ್ಯವಸ್ಥೆ ಜಾರಿ ಮಾಡಲಾಗಿದೆ ಎಂದು ತಿಳಿಸಿದರು.

ಮಾಧ್ಯಮಗಳ ಮುಂದೆ ಹಿರೇಮಠ್ ನೀಡುತ್ತಿರುವ ದಾಖಲೆಗಳೆಲ್ಲಾ ಸುಳ್ಳು. ಈ ಹಿಂದೆ ಎಚ್ಡಿಕೆ ಸಿಎಂ ಆಗಿದ್ದಾಗ ಬಿಡುಗಡೆ ಮಾಡಿದ್ದ ದಾಖಲೆಗಳನ್ನೇ ಹಿರೇಮಠ್ ಪದೇಪದೇ ತೋರಿಸುತ್ತಿದ್ದಾರೆ. ಅವರು ದೊಡ್ಡವರು, ಅವರ ಹೇಳಿಕೆ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ ಎಂದರು.

ಹಿರೇಮಠ್ ಆರೋಪದ ಹಿಂದೆ ಯಾರಿದ್ದಾರೆ ಎಂಬುದು ಜಗತ್ತಿಗೆ ಗೊತ್ತಿದೆ ಎಂದು ಎಚ್ಚಿಕೆ ವಿರುದ್ಧ ಪರೋಕ್ಷ ಆರೋಪ ಮಾಡಿದರು.

**ನಿಗಮ-ಮಂಡಳಿಗೆ ನೇಮಕ:** ಲೋಕಸಭಾ ಚುನಾವಣೆ ನಂತರ ನಿಗಮ-ಮಂಡಳಿಗಳಿಗೆ ಅಧ್ಯಕ್ಷರು ಹಾಗೂ ಸದಸ್ಯರ ನೇಮಕಾತಿ ಮಾಡಲು ನಿರ್ಧರಿಸಲಾಗಿದೆ ಎಂದು ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

ತಾಲೂಕು ಹಾಗೂ ಜಿಲ್ಲಾಮಟ್ಟದಲ್ಲಿರುವ ಕೆಲವು ಸಮಿತಿಗಳಿಗೆ ಈಗಾಗಲೇ ಅಧ್ಯಕ್ಷರು, ಸದಸ್ಯರ ನೇಮಕಾತಿ ಪ್ರಕ್ರಿಯೆ ಆರಂಭವಾಗಿದೆ. ರಾಜ್ಯ ಮಟ್ಟದ ನಿಗಮ, ಮಂಡಳಿ ಹಾಗೂ ಸಮಿತಿಗಳಿಗೆ ಚುನಾವಣೆ ನಂತರ ನೇಮಕ ಮಾಡಲಾಗುತ್ತದೆ. ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರನ್ನು ಕಡೆಗಣಿಸುವ ಪ್ರಶ್ನೆ ಇಲ್ಲ ಎಂದು ಸ್ಪಷ್ಟಪಡಿಸಿದರು.

### ನಾನು ಹಿರೇಮಠ್ ಫ್ಯಾನ್...

ನಾನು ಹಿರೇಮಠ್ ಅವರ ದೊಡ್ಡ ಅಭಿಮಾನಿ, ನಾನು ಅವರ ಫ್ಯಾನ್ ಆಗಿರುವುದರಿಂದ ಆಗಾಗ್ಗೆ ಅವರು ನನ್ನ ಬಗ್ಗೆ ಮಾತನಾಡುತ್ತಾರೆ. ಯಾವುದೇ ಕಾರಣಕ್ಕೂ ಫ್ಯಾನ್‌ಗೆ ಪವರ್ ಕಟ್ ಮಾಡುವುದಿಲ್ಲ ಎಂದು ಎಸ್.ಆರ್.ಹಿರೇಮಠ್ ವಿರುದ್ಧ ತಮ್ಮದೇ ಶೈಲಿಯಲ್ಲಿ ವಾಗ್ದಾಳಿ ನಡೆಸಿದರು.

---

**ರಾಜ್ಯ / STATE**

Vijaya Karnataka 23/2/14

# ಪರೀಕ್ಷೆಗಿಲ್ಲ ಕರೆಂಟ್ ಕಟ್: ಡಿಕೆಶಿ

**ಬೆಂಗಳೂರು:** ವಿದ್ಯಾರ್ಥಿಗಳಿಗೆ ಪರೀಕ್ಷೆ ಸಮೀಪಿಸಿದ್ದರಿಂದ ಕರೆಂಟ್ ಕಣ್ಣಾಮುಚ್ಚಾಲೆ ಇರುವುದಿಲ್ಲ ಎಂದು ರಾಜ್ಯ ಸರಕಾರ ಭರವಸೆ ನೀಡಿದೆ.

''ಯಾವುದೇ ಕಾರಣಕ್ಕೂ ಮಕ್ಕಳಿಗೆ ಓದಲು ತೊಂದರೆಯಾಗಬಾರದು. ಗ್ರಾಮೀಣ ಪ್ರದೇಶದಲ್ಲೂ ಕರೆಂಟ್ ಸಮಸ್ಯೆ ಎದುರಾಗಬಾರದು. ಹೀಗಾಗಿ ದಿನದ 24 ಗಂಟೆ ಕಾಲ ಸಿಂಗಲ್ ಫೇಸ್ ವಿದ್ಯುತ್ ಪೂರೈಸಲಾಗುವುದು,'' ಎಂದು ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಇಂಧನ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

''ಕೇಂದ್ರ ಸರಕಾರದ ಮಧ್ಯಸ್ಥಿಕೆಯೊಂದಿಗೆ ದಾಮೋದರ ವ್ಯಾಲಿಯ ಗ್ರಿಡ್‌ನಿಂದ 900 ಮೆಗಾ ವ್ಯಾಟ್ ಕೇಳಲಾಗಿದೆ. 450 ಮೆಗಾ ವ್ಯಾಟ್ ನೀಡಲು ಕೇಂದ್ರ ಸಹಿ ಹಾಕಿದೆ. ಇದು 25 ವರ್ಷದ ಅವಧಿಯ ಒಪ್ಪಂದವಾಗಿದೆ,'' ಎಂದರು.

''ಬಿಡದಿ ಅನಿಲ ವಿದ್ಯುತ್ ಸ್ಥಾವರ ನಿರ್ಮಾಣ ವಿಚಾರ ನ್ಯಾಯಾಲಯದಲ್ಲಿದೆ. ಈ ಸ್ಥಳದಲ್ಲಿ ಸಾಧ್ಯವಾಗದಿದ್ದರೆ, ಯಲಹಂಕದಲ್ಲಿ ಈ ಸ್ಥಾವರ ನಿರ್ಮಿಸಲಾಗುವುದು. ಪ್ರತಿ ತಾಲೂಕಿನಲ್ಲೂ ಟ್ರಾನ್ಸ್‌ಫಾರ್ಮರ್ ಬ್ಯಾಂಕ್ ಸ್ಥಾಪಿಸಿ ದುರಸ್ತಿ ಕೇಂದ್ರ ಆರಂಭಿಸಲಾಗುವುದು. ಕುಡಿಯುವ ನೀರಿನ ಉದ್ದೇಶದ ಟಿಸಿ ಕೆಟ್ಟರೆ 24 ಗಂಟೆಯಲ್ಲಿ, ರೈತರ ಪಂಪ್‌ಸೆಟ್‌ಗಳಿಗೆ ಒದಗಿಸಲಾದ ಈ ಯಂತ್ರ ಕೈಕೊಟ್ಟರೆ 3 ದಿನದೊಳಗೆ ದುರಸ್ತಿಗೊಳ್ಳಲಿದೆ,'' ಎಂದು ಹೇಳಿದರು.

**ಹಿರೇಮಠ್ ಅಭಿಮಾನಿ**

''ನಾನು ಹಿರೇಮಠ್ ಅವರ ಅಭಿಮಾನಿ. ಅವರು ಆಗಾಗ ನನ್ನ ಹೆಸರು ಬಳಸುತ್ತಿದ್ದಾರೆ. ಅವರ ಎಲ್ಲ ಆರೋಪಗಳೂ ಸತ್ಯಕ್ಕೆ ದೂರವಾಗಿವೆ. ಕುಮಾರಸ್ವಾಮಿ ಸಿಎಂ ಆಗಿದ್ದಾಗ ನಾನು ಹಾಗೂ ನನ್ನ ಕುಟುಂಬದ ವಿರುದ್ಧ ಹಲವು ಸುಳ್ಳು ಮೊಕದ್ದಮೆ ದಾಖಲಿಸಿದ್ದರು. ಅವನ್ನೆಲ್ಲ ಹಿರೇಮಠ್ ಮತ್ತೆ ಬಿಡುಗಡೆ ಮಾಡುತ್ತಿದ್ದಾರೆ,'' ಎಂದು ಪ್ರಶ್ನೆಯೊಂದಕ್ಕೆ ಸಚಿವ ಶಿವಕುಮಾರ್ ಪ್ರತಿಕ್ರಿಯಿಸಿದರು.

---

ಕನ್ನಡ ಪ್ರಭ 23/02/14

# ಪರೀಕ್ಷೆ ಸಮಯದಲ್ಲಿ ಪವರ್ ಕಟ್ ಇಲ್ಲ

ಮೊದಲ ಪುಟದಿಂದ ◄

ದಕ್ಷಿಣ ಭಾರತದಲ್ಲಿ ಕರ್ನಾಟಕ ರಾಜ್ಯದಲ್ಲೇ ಅತಿ ಹೆಚ್ಚು ವಿದ್ಯುತ್ ಬಳಕೆ ಶುಲ್ಕ ಸಂಗ್ರಹವಾಗುತ್ತಿದೆ. ಹಾಗೇಂದ ಮಾತ್ರಕ್ಕೆ ಶುಲ್ಕ ಇಳಿಕೆಯಂತ ಗಿಮಿಕ್ ಮೂಲಕ ಪ್ರಚಾರ ಗಿಟ್ಟಿಸಲು ನಾನು ಸಿದ್ಧನಿಲ್ಲ. ಆದರೆ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡುವುದಕ್ಕೆ ಎಲ್ಲ ರೀತಿಯ ಪ್ರಯತ್ನ ನಡೆಸುತ್ತೇನೆ. ಔದ್ಯಮಿಕ, ವಾಣಿಜ್ಯ, ಕೃಷಿ ಹಾಗೂ ಗೃಹ ಬಳಕೆ ಕ್ಷೇತ್ರದಲ್ಲಿ ಇಂಧನ ವ್ಯತ್ಯಯವಾಗದಂತೆ ನೋಡಿಕೊಳ್ಳುವುದು ನನ್ನ ಗುರಿ ಎಂದು ಹೇಳಿದರು.

**ಪವರ್ ಕಟ್ ಇಲ್ಲ:** ಬೇಸಿಗೆ ಸಮೀಪಿಸುತ್ತಿದೆ. ಈ ಸಂದರ್ಭದಲ್ಲಿ ವಿದ್ಯುತ್ ಕೊರತೆ ಸಹಜ. ಆದರೆ ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ಸರ್ಕಾರ ಮುತುವರ್ಜಿ ವಹಿಸಲಿದೆ. ಪರೀಕ್ಷಾ ಸಂದರ್ಭದಲ್ಲಿ ಗ್ರಾಮೀಣ, ನಗರ ಎಂಬ ಭೇದವಿಲ್ಲದೆ ಪವರ್ ಕಟ್ ಮಾಡಬಾರದು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದ್ದೇನೆ. ಹೀಗಾಗಿ ವಿದ್ಯಾರ್ಥಿ ಸಮುದಾಯ ಆತಂಕ ಪಡಬೇಕಾದ ಸಂದರ್ಭ ಉದ್ಭವಿಸುವುದಿಲ್ಲ ಎಂದು ಅಭಿಪ್ರಾಯಪಟ್ಟರು.

## ಹಿರೇಮಠ್ ಮಾತಿನಲ್ಲಿ ಎಚ್‌ಡಿಕೆ ಧ್ವನಿ: ಡಿಕೆಶಿ

ನಾನು ಎಸ್.ಆರ್. ಹಿರೇಮಠ್ ಅವರ ಅಭಿಮಾನಿ. ಅವರಿಗೆ ಪ್ರತಿ ದಿವಸ ನನ್ನ ನೆನಪು ಮಾಡಿಕೊಳ್ಳದಿದ್ದರೆ ನಿದ್ದೆ ಬರುವುದಿಲ್ಲ. ಆದರೆ ಹಿರೇಮಠ್‌ರ ಪ್ರತಿ ಮಾತಿನ ಹಿಂದೆ ಎಚ್.ಡಿ. ಕುಮಾರಸ್ವಾಮಿ ಅವರ ಧ್ವನಿ ಕೇಳಿಸುತ್ತಿದೆ ಎಂದು ಇಂಧನ ಸಚಿವ ಡಿ.ಕೆ. ಶಿವಕುಮಾರ್ ವ್ಯಂಗ್ಯವಾಡಿದ್ದಾರೆ. ಪ್ರದೇಶ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ನನ್ನ ಹೆಸರು ಬಳಸಿಕೊಳ್ಳುವುದರಿಂದಲೇ ಅವರಿಗೆ ಮಾಧ್ಯಮದಲ್ಲಿ ಹೆಚ್ಚು ಪ್ರಚಾರ ಸಿಗುತ್ತಿದೆ. ಪ್ರತಿ ದಿನ ಹೊಸ ಬಾಂಬ್ ಸಿಡಿಸುತ್ತೇನೆ ಎಂದು ನನಗೆ ಪುಷ್ಪ ಗುಚ್ಛ ಕಳಿಸುತ್ತಿದ್ದಾರೆ. ಆದರೆ ಇದೆಲ್ಲವನ್ನೂ ಗೌರವಾನ್ವಿತ ಎಚ್.ಡಿ. ಕುಮಾರಸ್ವಾಮಿ ಅವರು ಈ ಹಿಂದೆ ಮಾಡಿದ ಆರೋಪವೇ ಆಗಿದೆ. ಹಿಂದೆ ಅವರು ಮಾಡಿದ ಆರೋಪವನ್ನು ಈಗ ಹಿರೇಮಠ್ ಪುನರುಚ್ಚರಿಸುತ್ತಿದ್ದಾರೆ ಎಂದು ಕಟಕಿಯಾಡಿದರು. ಹಿರೇಮಠ್ ವಿರುದ್ಧ ಸಿಬಿಐ ತನಿಖೆ ನಡೆಸುವಂತೆ ರಮೇಶ್‌ಕುಮಾರ್ ಅವರು ಆಗ್ರಹಿಸಿರುವ ಬಗ್ಗೆ ಪ್ರಶ್ನಿಸಿದಾಗ, ನಾನು ಹಿರೇಮಠ್‌ರ ವೈಯಕ್ತಿಕ ವಿಚಾರಗಳಿಗೆ ಕೈ ಹಾಕಲು ಹೋಗುವುದಿಲ್ಲ. ಇಂಧನ ಸಚಿವನಾಗಿ ನಾನು ನನ್ನ 'ಫ್ಯಾನ್'ಗೆ ಹೆಚ್ಚು ಶಕ್ತಿ ನೀಡಲು ಬಯಸುತ್ತೇನೆ ಎಂದು ವ್ಯಂಗ್ಯವಾಡಿದರು.

**ನೇಮಕ ವಿಳಂಬ:** ಆದರೆ ನಿಗಮ- ಮಂಡಳಿ ಅಧ್ಯಕ್ಷ, ಉಪಾಧ್ಯಕ್ಷರ ನೇಮಕ ಪ್ರಕ್ರಿಯೆಯನ್ನು ಲೋಕಸಭಾ ಚುನಾವಣೆ ಮುಗಿಯುವವರೆಗೆ ಮಾಡದೇ ಇರಲು ನಿರ್ಧರಿಸಲಾಗಿದೆ ಎಂದ ಶಿವಕುಮಾರ್, ಸಮನ್ವಯ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಆದರೆ ಜಿಲ್ಲಾ ಹಾಗೂ ತಾಲೂಕು ಸಮಿತಿಗಳಿಗೆ ಕಾರ್ಯಕರ್ತರನ್ನು ಅಧ್ಯಕ್ಷರು ಹಾಗೂ ಸದಸ್ಯರಾಗಿ ನೇಮಕ ಮಾಡಲಾಗಿದೆ. ಸದ್ಯದಲ್ಲೇ ಆದೇಶ ಪತ್ರ ತಲುಪುತ್ತದೆ ಎಂದು ಹೇಳಿದರು.